**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಎಫ್.ಟಿ.ಎಸ್.ಸಿ.-1, ಹಾವೇರಿ.**
**ಎಸ್.ಸಿ. ನಂ. 18/2020**

PW-16
CW-03

ಸಾಕ್ಷಿದಾರರ ಹೆಸರುಃ ಶ್ರುತಿ ಸುರೇಶ ವಾಲಿಕಾರ

ತಂದೆ ಹೆಸರುಃ ಸುರೇಶ ವಾಲಿಕಾರ

ವಯಸ್ಸುಃ 33

ಉದ್ಯೋಗಃ ಆರೋಗ್ಯ ನೀರಿಕ್ಷಕರು

ವಾಸ ಸ್ಥಳಃ ಬ್ಯಾಡಗಿ

ದಿನಾಂಕಃ **24.07.2025** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯ್ತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೊಜಕರಿಂದಃ

1) ನಾನು 2018- 2019 ರಲ್ಲಿ ಶಿಗ್ಗಾಂವ ನಗರಸಬೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾ ಅದೇ ಊರಿನಲ್ಲಿ ವಾಸವಾಗಿದ್ದೆ.

2) ದಿಃ 17.08.2019 ರಂದು ನನ್ನನ್ನು ಮೃತ ಶಾಂತಾಬಾಯಿ ಇವರ ಶವ ಪಂಚನಾಮೆಗಾಗಿ ಕರೆಸಿದ್ದರು. ಸದರಿಯವರು ಶವವು ಶಿಗ್ಗಾಂವ ಬಜಾರ್ ರಸ್ತೆಯ ಅವರ ಮನೆಯಲ್ಲಿ ಇದ್ದು, ವೃತ್ತ ನೀರಿಕ್ಷಕರು ಶಿಗ್ಗಾಂವ ವೃತ್ತ ಇವರ ಮನವಿಯ ಮೇರೆಗೆ ಹೋಗಿದ್ದೆ. ಅಲ್ಲಿ ತನಿಖಾಧಿಕಾರಿಗಳು ಇದ್ದರು. ನನ್ನ ಜೊತೆ ನನ್ನ ಸಿಬ್ಬಂದಿ ಸತೀಶ ತಳವಾರ, ಯಲ್ಲಪ್ಪ ಹಾಗೂ ನೀಲಮ್ಮ ಹಾಜರಿದ್ದರು. ಮೃತ ಶಾಂತಾಬಾಯಿ ತಮ್ಮ ಹಾಗೂ ಮಗ ಅಲ್ಲಿ ಹಾಜರಿದ್ದು ಅವರೇ ಮೃತಳ ಶವವನ್ನು ತೋರಿಸಿರುತ್ತಾರೆ.

3) ನಾನು ಶವದ ಹತ್ತಿರ ಹೋಗಿ ನೋಡಿದಾಗ ಶವ ಮಂಚದ ಮೇಲೆ ಇತ್ತು ಹಾಗೂ ಸದರಿ ಹಾಸಿಗೆಯ ಮೇಲೆ ಎರಡು ಪಕ್ಕದಲ್ಲಿ ದಿಂಬುಗಳು ಇದ್ದವು.

4) ಶವದ ಬಲಭಾಗದ ತುಟಿ ಹರಿದು ರಕ್ತ ಕಿವಿಯವರೆಗೆ ಹರಿದಿತ್ತು. ಈ ಹಂತದಲ್ಲಿ ನೀವು ತುಟಿ ಹರಿದಿರುವುದನ್ನು ಗಮನಿಸಿದಿರಾ ಎಂಬ ಸರ್ಕಾರಿ ಅಬಿಯೋಜಕರ ಪ್ರಶ್ನೆಗೆ ಸಾಕ್ಷಿಯು ರಕ್ತ ಬಂದಿರುವುದನ್ನು ಮಾತ್ರ ನೋಡಿರುತ್ತೇನೆ ಎಂದು ಹೇಳುತ್ತಾರೆ. ಮೃತಳ ಬಳೆಚೂರುಗಳು ಕೆಳಗೆ ಬಿದಿದ್ದವು. ಕುತ್ತಿಗೆಯಲ್ಲಿ ಸ್ಕಾಲ್ ಕಂಡು ಬಂದಿತ್ತು. ಮೃತಳು ಕಪ್ಪು ರವಿಕೆ ಹಾಗೂ ಗುಲಾಬಿ ಬಣ್ಣದ ಸ್ವೇಟರ್ ಹಾಕಿದ್ದರು. ಮತ್ತೆಯಾವ ಗಾಯಗಳು ಇದ್ದವು ಎಂಬುದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಎಡಕೆನ್ನೆಯ ಮೇಲೆ 4 ತೆರಚಿದ

ಗಾಯ , ಬಲಕೆನ್ನೆಯ ಮೇಲೆ 1 ತೆರಚಿದ ಗಾಯ ಇತ್ತು. ನನ್ನ ಸಮಕ್ಷಮ ತನಿಖಾಧಿಕಾರಿ ಶವ ಪಂಚನಾಮೆ ಜರುಗಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ಸದರಿ ಶವ ಪಂಚನಾಮೆಯನ್ನು ಮದ್ಯಾಹ್ನ 1.00 – 3.00 ವರೆಗೆ ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ಈಗಾಗಲೆ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ 3 ಛಾಯಾಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ನಾನು ಗುರುತಿಸುತ್ತೇನೆ. ಸದರಿ ಛಾಯಾಚಿತ್ರಗಳನ್ನು ಈಗಾಗಲೆ ನಿಪಿ-3 ರಿಂದ 5 ವರೆಗೆ ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದಃ</u>

5) ನಮ್ಮ ಕಚೇರಿಯಲ್ಲಿ ಚಲನ ವಲನ ವಹಿ ಇದೆ ಎಂದರೆ ಸರಿ. ನನ್ನ ಮೇಲಾಧಿಕಾರಿಗಳು ನನಗೆ ಲಿಖಿತವಾಗಿ ಪಂಚನಾಮೆಗೆ ಹೋಗಲು ಯಾವುದೇ ಆದೇಶ ಮಾಡಿರುವುದಿಲ್ಲ. ಪೋಲಿಸರು ನನಗೆ ಪಂಚನಾಮೆಗೆ ಬರಲು ನೋಟೀಸ ನೀಡಿರಲಿಲ್ಲ , ಆದರೆ ದೂರವಾಣಿ ಮುಖಾಂತರ ಹೇಳಿದ್ದರು . ನನಗೆ ಪೋಲಿಸರು ದೂರವಾಣಿ ಕರೆಯನ್ನು ಮದ್ಯಾಹ್ನ 1.00 ಗಂಟೆಗೆ ಮಾಡಿದ್ದರು.

6) ನಾನು ಪಂಚನಾಮೆಗೆ ಹೋದ ಬಗ್ಗೆ ಚಲನ ವಲನ ವಹಿಯಲ್ಲಿ ನಮೂದಿಸಿಲ್ಲ. ನಾನು ಪಂಚನಾಮೆಯ ದಿನಾಂಕವನ್ನು ಚೀಟಿಯಲ್ಲಿ ಬರೆದುಕೊಂಡು ನೋಡಿ ಹೇಳಿರುತ್ತೇನೆ ಎಂದರೆ ಸರಿ. ಸಾಕ್ಷಿಯು ನನಗೆ ದಿನಾಂಕ ನೆನಪಿದೆ ಎಂದು ನುಡಿಯುತ್ತಾರೆ. ನನಗೆ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂಬುದು ಗೊತ್ತಿದೆ. ಗಾಯವಾದ ಬಗ್ಗೆ ಹಾಗೂ ಅಲ್ಲಿ ಏನು ವಸ್ತುಗಳು ಇದ್ದವು ಎಂದು ಬರೆಯಲಾಗಿದೆ.

7) ನನ್ನ ಸಮಕ್ಷಮ ಪೋಲಿಸರು ಪಂಚನಾಮೆ ಜರುಗಿಸಿ ಅದರಲ್ಲಿ ಏನು ವಸ್ತುಗಳು ಇದ್ದವು ಮತ್ತು ಅದರಲ್ಲಿ ಏನು ಗಾಯವಾಗಿದೆ ಎಂದು ಬರೆದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತಳ ಎಡಕೆನ್ನೆಯ ಮೇಲೆ 4 ತೆರಚಿದ ಗಾಯ , ಬಲಕೆನ್ನೆಯ ಮೇಲೆ 1 ತೆರಚಿದ ಗಾಯ ಹಾಗೂ ತುಟಿ ಹರಿದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8) ನನ್ನ ಸಮಕ್ಷಮ 4 ಜನ ಸಹಿ ಮಾಡಿರುತ್ತಾರೆ. ನನ್ನ ಸಮಕ್ಷಮ ಶವ ಪಂಚನಾಮೆ ಜರುಗಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.